ಇನ್ನುಳಿದ ಪಟ್ಟಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾ ವರದಿ ಸಿದ್ದಪಡಿಸಲು ಅಧ್ಯಯನ ನಡೆಸಲಾಗುತ್ತಿದೆ.

ಊ) ತೇರದಾಳ ಮತ ಕ್ಷೇತ್ರದಲ್ಲಿ ತೇರದಾಳ ಮತ್ತು ಮಹಾಲಿಂಗಪುರ ಈ ಎರಡು ಪುರಸಭೆಗಳು ಇದ್ದು, ಅವುಗಳನ್ನು ಎಡಿಬಿ ಯಲ್ಲಿ ಯಾವಾಗ ತೆಗೆದುಕೊಳ್ಳಲಾಗುವುದು?

ಎ.ಡಿ.ಬಿ.ನೆರವಿನ ಯೋಜನೆಯಡಿ ಈಗಾಗಲೇ 25 ಪಟ್ಟಣಗಳನ್ನು ಆಯ್ಕೆ ಮಾಡಿ ಅಂತಿಮಗೊಳಿಸಲಾಗಿದ್ದು, ಈ ಹಂತದಲ್ಲಿ ಯಾವುದೇ ಪಟ್ಟಣಗಳನ್ನು ಈ ಯೋಜನೆಯಡಿ ಸೇರಿಸಲು ಅವಕಾಶವಿರುವುದಿಲ್ಲ.

195 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ 2008–09 ರಲ್ಲಿ ಮೀನುಗಾರರಿಗೆ ಎಷ್ಟು ಮತ್ಸ್ಯಾಶ್ರಯ ಮನೆಗಳನ್ನು ಕೊಡಲಾಗಿದೆ (ಜಿಲ್ಲಾವಾರು ಮಾಹಿತಿ ಪೂರೈಸುವುದು)

2008–09ನೇ ಸಾಲಿನಲ್ಲಿ ಇದುವರೆವಿಗೆ ಮತ್ಸ್ಯಾಶ್ರಯ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ.

ಆ ತೇರದಾಳ ಮತಕ್ಷೇತ್ರಕ್ಕೆ ಎಷ್ಟು ಮನೆಗಳನ್ನು ಕೊಡಲಾಗಿದೆ; ಇಲ್ಲವಾದಲ್ಲಿ ಕಾರಣಗಳೇನು;

ಅನ್ವಯಿಸುವುದಿಲ್ಲ.

ಇ ತೇರದಾಳ ಮತಕ್ಷೇತ್ರದಲ್ಲಿ ಎಷ್ಟು ಜನ ಮೀನುಗಾರರಿರುವರು; ಇಲ್ಲಿಯವರೆಗೆ 2008–09 ರಲ್ಲಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ.,

ತೇರದಾಳ ಮತಕ್ಷೇತ್ರದಲ್ಲಿ ಅಂದಾಜು 400–500 ಜನ ಮೀನುಗಾರರು ಇದ್ದಾರೆ.

2008–09ನೇ ಸಾಲಿನಲ್ಲಿ ನೀಡಿರುವ ಸೌಲಭ್ಯಗಳು:

1) 10 ಜನ ಫಲಾನುಭವಿಗಳಿಗೆ ಬಲೆ ಖರೀದಿಗಾಗಿ ತಲಾ ರೂ.1000/– ಸಹಾಯಧನ ಮತ್ತು 12 ಜನ ಫಲಾನುಭವಿಗಳಿಗೆ ಮೀನು ಮಾರಾಟಕ್ಕೆ ಸೈಕಲ್ ಐಸ್‌ಬಾಕ್ಸ್ ಖರೀದಿಗಾಗಿ ತಲಾ ರೂ.1250/– ಸಹಾಯಧನ ಮಂಜೂರು ಮಾಡಿದ್ದು ಸವಲತ್ತನ್ನು ಶೀಘ್ರ ನೀಡಲಾಗುವುದು.
2) ಜಿಲ್ಲಾ ವಿಶೇಷ ಘಟಕ ಯೋಜನೆಯಡಿ ಒಬ್ಬ ಫಲಾನುಭವಿಗೆ ಮೀನುಗಾರಿಕೆ ಸಲಕರಣೆ ಖರೀದಿಗಾಗಿ ರೂ.5000/– ಸಹಾಯಧನ ಮಂಜೂರು ಮಾಡಿದ್ದು ಸವಲತ್ತನ್ನು ಶೀಘ್ರ ನೀಡಲಾಗುವುದು.

3) ತೇರದಾಳ ಮೀನುಗಾರರ ಸಹಕಾರ ಸಂಘಕ್ಕೆ 2 ಕೆರೆಗಳ ಗುತ್ತಿಗೆಯನ್ನು 2008–09ನೇ ಸಾಲಿಗೆ ನವೀಕರಿಸಲಾಗಿದೆ.

ಈ ಮೀನುಗಾರರಿಗೆ ಇಲಾಖೆಯಿಂದ ಯಾವ ಯಾವ ಸೌಲಭ್ಯಗಳನ್ನು ಕೊಡಲಾಗುವುದು?

ಒಳನಾಡು ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ರಾಜ್ಯದಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು ಅಥವಾ ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿ ಪಡಿಸುವುದು.
- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ
  - ಖಾಸಗಿ ಕ್ಷೇತ್ರದಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ
  - ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ
  - ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯಧನ
  - ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯಧನ
  - ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ
- ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆಯ ಅಭಿವೃದ್ಧಿ.
- ಇದಲ್ಲದೆ ಮಹಿಳಾ ಮೀನುಗಾರರಿಗೆ "ಮತ್ಸ್ಯ ಮಹಿಳಾ ಸ್ವಾವಲಂಬನಾ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

196 ಶ್ರೀ ಸಿದ್ದು ಸವದಿ

ಮಾನ್ಯ ಸಾರಿಗೆ ಸಚಿವರು.

ಅ) ತೇರದಾಳ ಮತಕ್ಷೇತ್ರದಲ್ಲಿ ತೇರದಾಳ, ಮಹಾಲಿಂಗಪುರ ಮತ್ತು ರಬಕವಿ ಬನಹಟ್ಟಿ ನಗರಗಳಲ್ಲಿ ಬಸ್ ಡಿಪೋ ಪ್ರಾರಂಭಿಸಲು ಯೋಚಿಸಲಾಗಿದೆಯೇ; ಈ ಬಗ್ಗೆ ಬೇಡಿಕೆ ಇದು ಅದನ್ನು ಯಾವಾಗ ಪ್ರಾರಂಭಿಸಲಾಗುವುದು;

ಇಲ್ಲ.